ಸಾಹಸ ಕ್ರೀಡೆ

# ಸ್ಕೈ ಡೈವಿಂಗ್



ಆಕಾಶದಲ್ಲಿ ಹಾರಾಡುವ ಖುಷಿಯಲ್ಲಿ...

**ಎಪ್ಪತ್ತಾರರ ಅಪ್ಪನೊಂದಿಗೆ ಮಗಳ ಸಾಹಸಯಾನ**

## ಆಗಸದಲ್ಲಿ ಆಟ, ಭೂಮಿಯತ್ತ ನೋಟ

**ಅಗಾಧ ನೀಲಾಕಾಶದಲ್ಲಿ ಹಕ್ಕಿಯಂತೆ ಹಾರಾಡುತ್ತಾ ಭೂಮಿಯ ಚೆಲುವನ್ನು ಕಣ್ತುಂಬಿಕೊಳ್ಳುವ ಆಸೆ ಹೊತ್ತು ಸ್ಕೈಡೈವಿಂಗ್ ಮಾಡಿರುವ ಅನುಭವವನ್ನು ಸ್ಮಿತಾ ರಾವ್ ಇಲ್ಲಿ ಹಂಚಿಕೊಂಡಿದ್ದಾರೆ. ಅಂದಹಾಗೆ, ಅವರ 76 ವರ್ಷದ ತಂದೆ ಪ್ರಭಾಕರ್ ರಾವ್ ಕೂಡ ಈ ರೋಮಾಂಚನಕಾರಿ ಸಾಹಸ ಕ್ರೀಡೆಯಲ್ಲಿ ಜೊತೆಯಾದುದು ವಿಶೇಷ.**

ಬಾಲ್ಯದಲ್ಲಿ ಆಕಾಶದಲ್ಲಿ ಹಾರಾಡುವ ವಿಮಾನದ ಸದ್ದು ಕೇಳಿದಾಗಲೆಲ್ಲಾ ಮನೆಯಿಂದ ಹೊರಗೋಡಿ ಬಂದು ಬಾನಿನತ್ತ ಅಚ್ಚರಿಯಿಂದ ನೋಡುತ್ತಿದ್ದೆ. ಆದರೆ ಯಾವುದೇ ಕಲಿಕೆ, ಅನುಭವವಿಲ್ಲದಿದ್ದರೂ ಜನಸಾಮಾನ್ಯರೂ ವಿಮಾನದಿಂದ ನೆಗೆದು ಪ್ಯಾರಾಚ್ಯೂಟ್ ಸಹಾಯದಿಂದ ನೆಲ ಮುಟ್ಟಬಹುದೆನ್ನುವ ಕಲ್ಪನೆಯೂ ಆಗ ನನಗಿರಲಿಲ್ಲ. ಆನಂತರ ತಿಳಿಯಿತು, ಇಂಥದ್ದೊಂದು ಸಾಹಸ ಕ್ರೀಡೆಯ ಹೆಸರು 'ಸ್ಕೈಡೈವಿಂಗ್' ಎಂದು.

ಸುಮಾರು 13ರಿಂದ 18 ಸಾವಿರ ಅಡಿ ಎತ್ತರದಿಂದ, ಗಂಟೆಗೆ 180 ಕಿ.ಮೀ. ವೇಗದಲ್ಲಿ ಭೂಮಿಯ ಗುರುತ್ವಾಕರ್ಷಣೆಗೆ ಒಳಪಟ್ಟು ಮೇಲಕ್ಕೆಸೆದ ಕಲ್ಲು ಕೆಳಗೆ ಬೀಳುವಂತೆ ಬೀಳುವ ಅನುಭವವು ಜೀವನದಲ್ಲಿನ ಅತ್ಯಂತ ರೋಮಾಂಚನಕಾರಿ ಕ್ಷಣಗಳಲ್ಲಿ ಒಂದಾಗಬಹುದು. ಅಂಥದ್ದೊಂದು ಅಪೂರ್ವ ಅನುಭವವನ್ನು ನಾನು, ನನ್ನ ತಂದೆಯೂ ಪಡೆಯಬೇಕೆಂಬುದು ನನ್ನ ಪುಟ್ಟ ಆಸೆಯಾಗಿತ್ತು. ಅದಕ್ಕೊಂದು ಅವಕಾಶ ಈ ಬಾರಿಯ ಜಪಾನ್ ಪ್ರವಾಸದಲ್ಲಿ ದೊರಕಿತು.

76 ವರ್ಷದ ನನ್ನ ತಂದೆ ಪ್ರಭಾಕರ್ ರಾವ್ ಮಂಗಳೂರು ಹಾಗೂ ನಾನು ಸ್ಕೈಡೈವಿಂಗ್ ಮಾಡಲು ನಿರ್ಧರಿಸಿದ್ದೆವು. ನನ್ನ ತಂದೆಯ ಧೈರ್ಯ ನನ್ನನ್ನೂ ಈ ಸಾಹಸಕ್ರೀಡೆಗೆ ಪ್ರೇರೇಪಿಸಿತ್ತು. ಸ್ಕೈಡೈವಿಂಗ್ ಮಾಡಲು ಜಪಾನಿನ 'ಟೋಕಿಯೊ ಸ್ಕೈಡೈವಿಂಗ್ ಕ್ಲಬ್'ನಲ್ಲಿ (tokyoskydivingclub.jp) ಎರಡು ವಾರ ಮುಂಚಿತವಾಗಿಯೇ ನೋಂದಣಿ ಮಾಡಿಸಿದ್ದೆವು. ನಿಗದಿತ ಸಮಯಕ್ಕಿಂತ ಒಂದು ಗಂಟೆ ಮುಂಚಿತವಾಗಿ ಟೋಕಿಯೊ ನಗರದ ಹೊರವಲಯದಲ್ಲಿರುವ ಸ್ಕೈಡೈವಿಂಗ್ ಕ್ಲಬ್‌ಗೆ ನಾನು, ನನ್ನ ತಂದೆ ಹಾಗೂ ನನ್ನ ಪತಿ ತಲುಪಿದೆವು.

ಸ್ಕೈಡೈವಿಂಗ್ ಮಾಡಲು ಒಬ್ಬರಿಗೆ ಸುಮಾರು 35ರಿಂದ 40 ಸಾವಿರ ರೂಪಾಯಿ ಖರ್ಚಾಗುತ್ತದೆ. ಹಣ ಪಾವತಿಸಿದ ನಂತರ ನಮಗೆ ಹದಿನೈದು ನಿಮಿಷ ಸ್ಕೈಡೈವಿಂಗ್ ಬಗ್ಗೆ ಮಾಹಿತಿ ಹಾಗೂ ವಿಮಾನದಿಂದ ಬೀಳುವಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರ ನೀಡಲಾಗುತ್ತದೆ.

ಸ್ಕೈಡೈವಿಂಗ್ ಮಾಡುವಾಗ ಸಡಿಲ ಉಡುಪುಗಳನ್ನಾಗಲೀ ಅಥವಾ ಇತರ ವಸ್ತುಗಳನ್ನಾಗಲಿ ಧರಿಸಿರಬಾರದು. ಹಾಗಾಗಿ ಅವರು ನನ್ನ ತಂದೆಯ ಕೃತಕ ಹಲ್ಲಿನ ಸೆಟ್ ಅನ್ನೂ ತೆಗೆದಿಡಲು ಹೇಳಿದರು.

ನಾವು ಮಾಡಿದ್ದು 'ಟ್ಯಾಂಡೆಮ್ ಸ್ಕೈಡೈವಿಂಗ್' (Tandem skydiving). ಹದಿನೆಂಟು ವರ್ಷದ ಮೇಲ್ಪಟ್ಟ ಯಾರಾದರೂ ಇದನ್ನು ಮಾಡಬಹುದು. ಇದಕ್ಕೆ ಯಾವುದೇ ಪರವಾನಗಿಯ ಅಗತ್ಯವಿರುವುದಿಲ್ಲ, ಧೈರ್ಯವಿದ್ದರೆ ಸಾಕು. ಟ್ಯಾಂಡೆಮ್ ಜಂಪನ್ನು ಲೈಸೆನ್ಸ್ ಹೊಂದಿರುವ ಸ್ಕೈಡೈವರ್ ಜೊತೆ ಮಾಡಲಾಗುತ್ತದೆ.

ನಮ್ಮ ಜೊತೆಗಿನ ಸ್ಕೈಡೈವರ್ ಬಳಿ ಪ್ಯಾರಾಚ್ಯೂಟ್ ಬ್ಯಾಕ್ ಪ್ಯಾಕ್‌ನಂತೆ ಇರುತ್ತದೆ. ನಮ್ಮೊಂದಿಗೆ ಪ್ಯಾರಾಚ್ಯೂಟ್ ಇರುವುದಿಲ್ಲ. ನಾವು ಮತ್ತು ನಮ್ಮ ಸ್ಕೈಡೈವರ್ ನಡುವೆ ಕೇವಲ 4 ಕೊಂಡಿಗಳು ಇರುತ್ತವಷ್ಟೆ. ಈ ನಾಲ್ಕು ಕೊಂಡಿಗಳೇ ನಮ್ಮಿಬ್ಬರನ್ನೂ ಗಟ್ಟಿಯಾಗಿ ಹಿಡಿದಿಟ್ಟಿರುತ್ತವೆ.

ಸ್ಕೈಡೈವಿಂಗ್‌ಗೆ ಅಗತ್ಯ ಸರಂಜಾಮುಗಳನ್ನು ಧರಿಸಿ ಸಣ್ಣ ವಿಮಾನದಲ್ಲಿ ಸ್ಕೈಡೈವರ್ ಜೊತೆಗೆ ಆಕಾಶಕ್ಕೆ ಹಾರಿದೆವು. ವಿಮಾನದಲ್ಲಿ ಮೋಡಗಳ ಮೇಲೆ ಹೋದಾಗ ನಮ್ಮ ನೆಲ ಅತಿ ಸುಂದರವಾಗಿ ಕಾಣುತ್ತಿತ್ತು. ಸುಮಾರು 15 ಸಾವಿರ ಅಡಿಗಳು ಎತ್ತರ ಹೋದ ಮೇಲೆ ನಮ್ಮ ವಿಮಾನದ ಪೈಲಟ್ ವಿಮಾನದ ಬಾಗಿಲನ್ನು ತೆರೆಯಲು ಅನುಮತಿ ಕೊಟ್ಟನು. ಎದೆ ಢವಗುಟ್ಟುತ್ತಲೇ, ವಿಮಾನದ ಬಾಗಿಲು ತೆರೆದುಕೊಂಡಿತು. ವಿಮಾನದ ಹೊರಗೆ ಹರಡಿದ್ದ ಅನಂತ ಆಕಾಶ ಕಂಡು ಒಮ್ಮೆಲೇ ಮೈ ನಡುಗುವಂತಾಯಿತು.